**ಗ್ರಹಿಕೆ ಬಹುತೇಕ ಸ್ತ್ರೀವಾದಿ ಹಿನ್ನೆಲೆಯವು. ಇಷ್ಟು ಮಾತ್ರವಲ್ಲದೆ, 'ಹೆಣ್ತನದ ಬರಹ' (un lenguaje hembrico) ಎನ್ನುವ ಒಂದು ಪ್ರಕಾರ ನಮ್ಮ ನಡುವಿದೆ ಎಂದು ನೀವು ಹೇಳುತ್ತಲೇ ಬರುತ್ತಿದ್ದೀರಿ. ನಿಮ್ಮ ಮೊದಲ ಕಥಾ ಸಂಕಲನದಿಂದಲೇ ಹೆಣ್ತನದ ವಿಶಿಷ್ಟ ಅಂಶಗಳನ್ನು ಕಥಾಪಾತ್ರಗಳಲ್ಲಿ ತರುತ್ತಿದ್ದೀರಿ. ಈ ಹಿನ್ನೆಲೆಯಲ್ಲಿ, ನನ್ನ ಪ್ರಶ್ನೆ ಏನೆಂದರೆ, ಸೃಜನಶೀಲ ಕೃತಿಯೊಂದನ್ನು ಬರೆಯುವ ಸಮಯದಲ್ಲಿ ನೀವು ತಾತ್ವಿಕ ಅಥವಾ ವೈಚಾರಿಕ ನಿಲುವುಗಳನ್ನು ಆಧಾರವಾಗಿಟ್ಟುಕೊಂಡು ಬರೆಯುವಿರಾ?**

ನಿಮ್ಮ ಈ ಆಸಕ್ತಿಗೆ ಮತ್ತು ಭಾರತದಲ್ಲಿ ನನ್ನ ಕಥೆಗಳನ್ನು ಓದುತ್ತಾರೆಂದು ತಿಳಿಸಿದ್ದಕ್ಕೆ ಧನ್ಯವಾದಗಳು. ನಿಜಕ್ಕೂ ನನಗಿದು ಅಚ್ಚರಿಯ ಸಂಗತಿ. ಭಾರತ ಒಂದು ಅದ್ಭುತವಾದ ದೇಶ. ಸಂಸ್ಕೃತಿಗಳ ಸಂಪದ್ಭರಿತ ನಾಡು. ನಿಮ್ಮ ಪ್ರಶ್ನೆಗೆ ಸಾಧ್ಯವಾದಷ್ಟು ನಿಖರವಾಗಿಯೂ ಚಿಕ್ಕದಾಗಿಯೂ ಉತ್ತರಿಸಲು ಯತ್ನಿಸುತ್ತೇನೆ.

ನಿಮ್ಮ ಮೊದಲ ಪ್ರಶ್ನೆಗೆ ನನ್ನ ಮೊದಲ ಉತ್ತರ – 'ಇಲ್ಲ'. ಸೃಜನಶೀಲ ಬರಹಗಳಲ್ಲಿ ತೊಡಗಿಕೊಳ್ಳುವಾಗ ಎಂದಿಗೂ ನಾನು ವೈಚಾರಿಕ ನಿಲುವುಗಳ ಹಿನ್ನೆಲೆಯಲ್ಲಿ ಬರೆಯುವುದಿಲ್ಲ. ಪದಗಳ ಮತ್ತು ಭಾವಗಳ ಸರಾಗ ಓಟದೊಳಗೆ ಕಥೆಯೊಂದು ಅರಳಲು ನನ್ನನ್ನು ನಾನು ಒಡ್ಡಿಕೊಳ್ಳುತ್ತೇನೆ. ಈ ಅಭ್ಯಾಸ ನನ್ನನ್ನು ಅಚ್ಚರಿಗೊಳಿಸಿದೆ. ಕಥೆಯೊಂದರ ಕಥಾಪಾತ್ರಗಳೂ ಕಥಾಹಂದರವೂ ಎಲ್ಲಿಂದ ಬರುತ್ತವೆ ಎಂಬುದು ನಿಜಕ್ಕೂ ವಿಸ್ಮಯ. ಆದರೆ, ಬರೆದ ನಂತರ, ಆ ಕಥೆಯನ್ನು ವಿಮರ್ಶಾತ್ಮಕ ಮತ್ತು ವೈಚಾರಿಕ ನೆಲೆಯಲ್ಲಿ (ಹಾಗೆಂದು ನಾನು ವಿಮರ್ಶಕಿಯೋ ಚಿಂತಕಿಯೋ ಅಲ್ಲ) ಪರಿಶೀಲಿಸುತ್ತೇನೆ. ಅಲ್ಲಿ ನನ್ನವೇ ಆದ ತಾತ್ವಿಕ/ ವೈಚಾರಿಕ ನೆಲೆಗಳು ಮೂಡಿರುವುದನ್ನು ಕಂಡು ಬೆರಗಾಗುತ್ತೇನೆ. ಉದಾಹರಣೆಗೆ ಹೇಳುವುದಾದರೆ, 'ಬ್ಲ್ಯಾಕ್ ನಾವೆಲ್ ವಿತ್ ಅರ್ಜೆಂಟೈನ್ಸ್' ಎಂಬ ಕಾದಂಬರಿಯನ್ನು ನಾನು 'ರೈಟಿಂಗ್ ವಿತ್ ದಿ ಬಾಡಿ' ಎನ್ನುವ ನನ್ನದೇ ಆದ ಚಿಂತನೆಯನ್ನು ಅಲ್ಲಿ ಕಂಡೆ. ನಂತರ ಹೆಣ್ಣುಗಳಿಗೆಂದೇ ಪ್ರತ್ಯೇಕವಾದ ಭಾಷೆ ಇರಬಹುದಾದ ಸಾಧ್ಯತೆಯನ್ನು **El Maana** ಕಾದಂಬರಿಯಲ್ಲಿ ನೋಡಿದೆ. ಇದಿನ್ನೂ ಇಂಗ್ಲಿಷ್‌ಗೆ ಅನುವಾದಗೊಂಡಿಲ್ಲ, ಆದರೆ ಜರ್ಮನ್ ಮತ್ತು ಕೊರಿಯನ್ ಭಾಷೆಗಳಿಗೆ ಅನುವಾದಗೊಂಡಿದೆ. ಇಲ್ಲಿಯ ನನ್ನ ಪ್ರಯೋಗ ಖಂಡಿತ

## ಲೂಯಿಸಾ ವೆಲಂಜುವೆಲ

ದಕ್ಷಿಣ ಅಮೆರಿಕದ ಸಮಕಾಲೀನ ಬರಹಗಾರರಲ್ಲಿ ಮುಖ್ಯವಾದ ಹೆಸರು ಲೂಯಿಸಾ ವೆಲಂಜುವೆಲ. ಈ ಜಗತ್ತನ್ನು ಹೆಣ್ಣಿನ ದೃಷ್ಟಿಕೋನದಿಂದ ನೋಡುವ ಲೂಯಿಸಾ 'ಹೆಣ್ಣಿಗೇ ಆದ ಪ್ರತ್ಯೇಕ ಭಾಷೆಯಿದೆ' ಎಂದು ನಂಬಿದವರು. ಆರಂಭದಲ್ಲಿದ್ದ ಬೋರ್ಹೆಸ್‌ನ ಪ್ರಭಾವದಿಂದ ಹೊರಬಂದು ಹೊಸ ಬಗೆಯ ಸಾಹಿತ್ಯವನ್ನು ಬರೆದವರು. ಸಾಹಿತ್ಯದ ಎಲ್ಲೆಗಳನ್ನು ವಿಸ್ತರಿಸಿ ಕಾದಂಬರಿ ಪ್ರಕಾರಕ್ಕೆ ಹೊಸ ಸ್ಪರ್ಶ ನೀಡಿದವರು. ದಕ್ಷಿಣ ಅಮೆರಿಕ ಖಂಡದ ಅರ್ಜೆಂಟೈನಾ ದೇಶಕ್ಕೆ ಸೇರಿದ ಇವರು ಬರೆದದ್ದು ಸ್ಪ್ಯಾನಿಶ್ ಭಾಷೆಯಲ್ಲಿ. ಇವರ ಬರಹಗಳು ಇಂಗ್ಲಿಷಿಗೆ ಮಾತ್ರವಲ್ಲದೆ ಯೂರೋಪಿಯನ್, ಏಷ್ಯಾ, ಆಫ್ರಿಕನ್ ಖಂಡಗಳ ವಿವಿಧ ಭಾಷೆಗಳಿಗೂ ಅನುವಾದಗೊಂಡಿವೆ. ಕನ್ನಡ, ತಮಿಳು, ಮಲೆಯಾಳಂ, ಬಂಗಾಳಿಯಂತಹ ಭಾರತೀಯ ಭಾಷೆಗಳಲ್ಲೂ ಇವರ ಕಥೆಗಳು ಬಂದಿವೆ. ದಕ್ಷಿಣ ಅಮೆರಿಕದ ಬಹುತೇಕ ಬರಹಗಾರರಂತೆ ಇವರೂ ಪ್ರಭುತ್ವದ ದಬ್ಬಾಳಿಕೆಯ ವಿರುದ್ಧ ನಿಂತ ಹೋರಾಟಗಾರ್ತಿಯೂ ಹೌದು. ಅರ್ಜೆಂಟೈನಾದ ಮಿಲಿಟರಿ ಮತ್ತು ಬಲಪಂಥೀಯ ಪಕ್ಷಗಳ ಸರ್ವಾಧಿಕಾರದ ವಿರುದ್ಧ ಇವರ ಕಾದಂಬರಿಗಳು ಸಂಚಲನವನ್ನೇ ಮೂಡಿಸಿದ್ದವು. ಈ ಕಾರಣಕ್ಕಾಗಿಯೇ ಲೂಯಿಸಾ ಅರ್ಜೆಂಟೈನಾ ತೊರೆದು ಅಮೆರಿಕದ ನ್ಯೂಯಾರ್ಕ್‌ನಲ್ಲಿ ಕೆಲವು ವರ್ಷಗಳು ನೆಲೆಸಬೇಕಾಯಿತು. ಈಗ ಅರ್ಜೆಂಟೈನಾದ ಬ್ಯುನಸ್ ಅಯರಸ್‌ನಲ್ಲಿ ನೆಲೆಸಿದ್ದಾರೆ.